ಓ.ಎಸ್. ನಂ. 171/2015
ಪಿ ಡಬ್ಲ್ಯೂ -2

ಓ.ಎಸ್. ನಂ. 171/2015
ಪಿ ಡಬ್ಲ್ಯೂ -2

**ಸಾಕ್ಷಿಯನ್ನು ದಿನಾಂಕಃ 22.11.2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಶ್ರೀ ಎಸ್.ಎನ್.ಹೆಚ್. ವಕೀಲರಿಂದ**

**1.** ವಾದಿಯ ಅಣ್ಣ ಲಕ್ಷ್ಮೀಕಾಂತ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ವಾದಿಯ ಅಣ್ಣ ಕಾಂತಣ್ಣ ಎಂದು ನುಡಿದಿದ್ದಾರೆ. ಲಕ್ಷ್ಮೀಕಾಂತ ಮತ್ತು ಅವರ ಹೆಂಡತಿ ಹಲವು ಬಾರಿ ಅಕ್ಕಿರಾಂಪುರ ಗ್ರಾಮದ ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾಗಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ವಾದಿಯ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇವೆ ಎಂದು ನನಗೆ ಗೊತ್ತಿಲ್ಲ. ವಾದಿಯ ಆಸ್ತಿಯನ್ನು ವಾದಿಯ ಅಣ್ಣ ಕಾಂತಣ್ಣ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಯ ವಾಸದ ಮನೆಯ ಚಕ್ಕುಬಂಧಿ ಹಾಗೂ ಖಾತೆ ನಂಬರ್ ನನಗೆ ಗೊತ್ತಿಲ್ಲ. ಯಾವ ಸ್ವತ್ತಿನ ಬಗ್ಗೆ ಈ ದಾವೆ ಹೂಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

**2.** ಈಗ ಸಾಕ್ಷಿಗೆ ತೋರಿಸಿದ ಫೋಟೋದಲ್ಲಿ ಪ್ರತಿವಾದಿಯ ಮನೆಯನ್ನು ನೋಡಿ ಗುರುತಿಸಿದ್ದಾರೆ. ಸದರಿ ಫೋಟೋವನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಮನೆಯ ಬಾಗಿಲು ಪೂರ್ವಕ್ಕೆ ಇರುತ್ತದೆ ಎಂದರೆ ಸರಿ. ಮನೆಯ ಪಶ್ಚಿಮಕ್ಕೆ ಕಲ್ಲು ಕಾಂಪೌಂಡ್ ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ಮನೆಯ ಹಿಂಭಾಗದಲ್ಲಿ ಚಿಗರೇ ಗಿಡಗಳು ಇರುತ್ತವೆ ಎಂದರೆ ಸಾಕ್ಷಿಯು ವಾದಿಯು ಹಾಕಿಕೊಂಡಿರುತ್ತಾರೆ ಎಂದು ನುಡಿದಿದ್ದಾರೆ. ಈಗ ಸಾಕ್ಷಿಗೆ ತೋರಿಸಿದ ಫೋಟೋದಲ್ಲಿ ಚಿಗರೇ ಗಿಡಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಸದರಿ ಫೋಟೋವನ್ನು ನಿಡಿ-2 ಎಂದು ಗುರುತಿಸಲಾಯಿತು. ಪ್ರತಿವಾದಿಗೆ ಸೇರಿದ ಕುರಿಗಳು ಇರುತ್ತವೆ ಎಂದರೆ ಇರಬಹುದು. ಸದರಿ ಕುರಿಗಳ ಮೇವಿಗಾಗಿ ನಿಡಿ-2 ರಲ್ಲಿ ತೋರಿಸಿದ ಚಿಗರೇ ಗಿಡಗಳನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು ವಾದಿಯು ಹಾಕಿರುತ್ತಾರೆ ಎಂದು ನುಡಿದಿದ್ದಾರೆ. ಪ್ರತಿವಾದಿಯ ಮನೆಯ ಪಶ್ಚಿಮಕ್ಕೆ ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾರಿಯು 8 ಅಡಿ ಅಗಲ ಇರುತ್ತದೆ ಎಂದು ನುಡಿದಿದ್ದಾರೆ.

**3.** ದಾವಾ ಸ್ವತ್ತಿನ ಖಾತೆ ನಂ. 444 ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಶಾಂತಮ್ಮನವರ ಮನೆಗೂ ಹಾಗೂ ವಾದಿಯ ಮನೆಗೂ 4 ಅಡಿ ದೂರ ಇತ್ತು. ಸಾಕ್ಷಿ ಮುಂದುವರೆದು ಶಾಂತಮ್ಮನವರ ಮನೆ ಮೊದಲು ಇದ್ದು ಈಗ ಇರುವುದಿಲ್ಲ ಎಂದು ನುಡಿದಿದ್ದಾರೆ. ಶಾಂತಮ್ಮನವರ ಮನೆಯ ದಕ್ಷಿಣಕ್ಕೆ ವಾದಿಯ ಮನೆ ಇರುತ್ತದೆ ಎಂದರೆ ಸಾಕ್ಷಿಯು ಅಲ್ಲಿ ನಿವೇಶನ ಇರುತ್ತದೆ ಎಂದು ನುಡಿದಿದ್ದಾರೆ. ವಾದಿ ಮತ್ತು ಅವರ ಅಣ್ಣನ ಮನೆ ಅಕ್ಕ-ಪಕ್ಕದಲ್ಲಿರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ವಾದಿಯ ಸ್ವತ್ತಿಗೂ 300 ಮೀಟರ್ ಅಂತರವಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ವಾದಿಯ ಅಣ್ಣನ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**